ಆತನನ್ನೇ ಧೇನಿಸಿದವಳು. ಹೀಗೆ ಚೇಷ್ಟೆ ಮಾಡುವ ಮಾತುಗಳು ಆಕೆಯ ಸ್ವಭಾವದ ಭಾಗವಾಗಿದ್ದವು. ಯಾವತ್ತು ನಗೆಚಾಟಿಕೆಯವಳು.

ಬಸವರಾಜ ತಮ್ಮ ಮತ್ತು ಗುರುಲಿಂಗರ ಚರ್ಚೆಯ ನಡುವೆ ಪ್ರವೇಶಿಸಿದ ಈ ಬಿಕ್ಕಟ್ಟು ಸ್ಥಿತಿಯನ್ನು ನಿಭಾಯಿಸುವಂತೆ, 'ಬೈ ದ ವೇ, ಈಕೀ ರೂಪಾ... ಸಣ್ಣಾಕಿ ಇದ್ದಾಗ ಬ್ಯಾಸಗಿ ಸೂಟ್ಯಾಗ ಬರತಿದ್ದಳು... ನಮ್ಮ ತೆಳಕಿನ ಮನಿ ಬಾಬು ಮಾಸ್ತರರ ಮೊಮ್ಮಗಳು... ಮೂವತ್ತ ವರ್ಷ ಮ್ಯಾಲಾತು... ಭೆಟ್ಟಿ ಆಗಿ...' ಬಸವರಾಜ, ಗುರುಲಿಂಗರಿಗೆ ರೂಪಾಳನ್ನು ಪರಿಚಯಿಸಿದ. 'ಹ ಹ ಹ ಅರೇ ಈಕೀ ನಮಗ ಪಾವಣ್ಯಾಳತಿ... ಎಕ್ಸಂಬಾ ಪಾವಣ್ಯಾರ ಕಡಿಂದ...' ಎಂದು ನಗುತ್ತಲೇ ಹೇಳಿ ಎದ್ದರು ಗುರುಲಿಂಗ ಮತ್ತು, 'ಮಾತಾಡತ ಇರಿ, ನಾ ಚಾಕ ಹೇಳಿ ಬಂದ್ನಿ...' ಅಂತ ಒಳಗೆ ಹೋದರು.

'ಆರಾಮದಿ...? ಭಾಳ ದಿನಾ ಯಾನ! ಭಾಳ ವರ್ಷಗಳ ಆದವು...' ಅಂದ. ಆಕೆ ಸಂಗಡದ ಆಕಸ್ಮಿಕ ಈ ಒಡನಾಟ ಆತನಲ್ಲಿ ವಿಲಕ್ಷಣ ಹುಮ್ಮಸ್ಸು, ಹೊಳಪು ತಂದಿತ್ತು. 'ಆರಾಮಂತ ತಿಳಕೋದ...' ಮುಗುಮ್ಮಾಗಿ ಅಂದು ಸುಮ್ಮನಾದಳು. ಈ ಮಾತಿನಲ್ಲಿ ಬದುಕಿನ ಬಿಡಿಸಲಾಗದ ಪದರುಗಳಿದ್ದವೋ ಏನೋ ಅನಿಸಿತು.

ಆಕೆ ದಿಟ್ಟಿಸಿ ನೋಡಿದಳು. ಬಸೂನು ಸಹ ಕಣ್ಣಿಟ್ಟು ದಿಟ್ಟಿಸಿದ. 'ಮಾಮಾ ನೀ ನನಗ ಕೈ ಕೊಟ್ಟಿ...' ಬೀಸಿ ಕಲ್ಲೆಸೆದಂತೆ ಮಾತು ರಪ್ಪನೇ ಕಿವಿಗಪ್ಪಳಿಸಿತು. ಬಸೂ ಸಹ ಇಂಥ ಅನಿರಿಕ್ಷಿತ ಎಸೆತಕ್ಕೆ ಚಲ್‌ಬಿಚಲ್ ಆದ. ಏನು? ಹೇಗೆ? ಪ್ರತಿಕ್ರಿಯಿಸಬೇಕೆಂಬುದು ಕ್ಷಣ ಕಾಲ ಆತನಿಗೆ ಹೊಳೆಯಲಿಲ್ಲ. ದೂಧಗಂಗಾ ಹೊಳೆಯಲ್ಲಿ ಸಾಕಷ್ಟು ನೀರು ಹರಿದು ಹೋಗಿದೆ. ಬೆಳೆದ ಹುಲ್ಲುಗಡ್ಡೆಯ ಹುಲ್ಲುಗಳ ಸೂಡುಗಳನ್ನು ಕತ್ತರಿಸಿ ಕಟ್ಟಿಯೂ ಆಗಿದೆ. ಹಲವಾರು ವಸಂತಗಳೇ ಚಿಗುರಿ, ಎಲೆ ಹಣ್ಣೆಲೆಯಾಗಿ ಉದುರಿದ ಕಾಲಗಳ ನಂತರದಲ್ಲಿ ಬಸೂ ರೂಪಾ ಸಂಧಿಸಿದ್ದು. ಹೀಗೊಂದು ಕೂಡುವ ಪ್ರಸಂಗವನ್ನು ಕಲ್ಪಿಸಿಯೂ ಇರಲಿಲ್ಲ. ಹಾಗೆ ಆಕೆಯನ್ನು ಹುಡುಕುವ ಯೋಚನೆ ಮಾಡಿಲ್ಲ ಅಂತಲ್ಲ.

'ಬಾಲಿ ಇದ್ದಾಗಿಂದ ನಿನ್ನ ಮ್ಯಾಲ ಮನಸಿಟ್ಟಿದ್ನಿ... ನೀನೂ ಕೂಡ ನನ್ನ ಸಂಗಾಟ ಸಲಿಗಿಲೇನ ಇದ್ದಿ... ನೀ ಏನೆಲ್ಲ ಮಾಡಿದೆಯೋ ಆ ಕಾರಣ ನಿನ್ನನ್ನ ಮದ್ವಿ ಆಗೋ ಆಸಿ ಭಾಳ ಇಟಕೊಂಡಿದ್ನಿ... ಎಲ್ಲಾ ಹಾಳಾತು... ಹಾಳ ಮಾಡಿದ್ರು...' ಬದುಕು ಕುಸಿದು ಹೋಗಿ ಆಸರೆಯೇ ಇಲ್ಲದ ಜೀವ ಭಾವದಿಂದ ಹೇಳಿದಳು. ಬದುಕು ಸಹ ಹಾಗೇನೆ. ಎದೆಯ ತಿದಿಯು ಉಸಿರೊತ್ತು ತನಕದ್ದು. ಅಲ್ಲಿ ತನಕ ಅನುಭವಿಸಲೇ ಬೇಕಲ್ಲ! ಎಂಬ ಭಾವವಿತ್ತು.

ದರವಾಜೆಯಲ್ಲಿ ಆಕೆಯ ಪ್ರತಿರೂಪದಂತಿದ್ದ ಮೂವತ್ತರೊಳಗಿನ ಚೆಲುವೆ ಬಂದು ನಿಂತಳು. ಮತ್ತು ಆಕೆಯನ್ನೇ ನೋಡತೊಡಗಿದಳು. 'ಎಯ್ ಪೋರಿ ಬಾ ಇಲ್ಲಿ...' ಎಂದು ರೂಪಾ ಆ ಹುಡುಗಿಯನ್ನು ಕರೆದಳು.

ಹುಡುಗಿ ಗಾದಿ ತೆಕ್ಕೆ ಹತ್ತಿರ ಕುಳಿತ್ತಿದ್ದ ಅವರಲ್ಲಿಗೆ ಆಗಮಿಸಿದಳು. ರೂಪಾಳ ಪಡಿಯಚ್ಚು ಆ ಪೋರಿ.

'ಬಾ, ನಮಸ್ಕಾರ ಮಾಡು... ಇವರು ನಮ್ಮ ಮಾಮಾ... ಪ್ರೊಫೆಸರ್ ಅದಾರು... ಸೋಶಿಯಾಲಜಿ... ಈಕಿ ಒಬ್ಬಳ ಮಗಳು... ಕವಿತಾ... ಎಂಬಿಎ ಮಾಡ್ಯಾಳು... ಬೆಂಗಳೂರದಾಗ ಕಂಪನ್ಯಾಗ ನೌಕರಿ ಮಾಡತಾಳು...' ಅಂದಳು.

ಕವಿತಾ ಕಾಲಿಗೆ ಬಿದ್ದು ನಮಸ್ಕರಿಸಿದಳು. 'ಛೇ ಛೇ ಇರಲೇಳು, ನಮಸ್ಕಾರ ಎಲ್ಲಾ ಯಾತಕ್ಕ!' ಅಂತ ಆತ ನಿರಾಕರಿಸುತ್ತಿರುವಾಗಲೇ ಪೊಡಮೊಟ್ಟಳು ಮತ್ತು 'ನಾ ಒಳಗ ಇರತ್ಯಾನ...' ಎಂದು ಒಳಗೆ ಹೋದಳು. ಕೆಲ ಹೊತ್ತು ಇಬ್ಬರಲ್ಲೂ ಮೌನ. ರೂಪಾ ಮೌನ ಒಡೆದಳು. ಮಾತು ನುಡಿದಳು.

'ನಾ ಸಣ್ಣಾಕಿದ್ದಾಗಿನ ಪ್ರೀತೀನ ಯಾಕ ಮರತಿ ಮಾಮಾ? ಧಾರವಾಡಕ ಕಲ್ಯಾಕ ಹ್ವಾದಾಂವಾ ಅಲ್ಲೇ ಉಳದ ಬಿಟ್ಟಿ... ನೌಕರೀನು ಹಿಡದಿ... ಪರತನಿಂದ ಪತ್ತೇನ ಇಲ್ಲ... ಕಾದ ಕಾದ ಸುಸ್ತ ಆದ್ನಿ...' ಎದೆಯೊಳಗೆ ಕಾದಲಿನ ಕಾಯುವಿಕೆಯ ಝಳದ ಕಾವಿತ್ತು. ಆ ಕಾವು ತಣ್ಣಗಾಗಿಸುವುದಕ್ಕೆ ಆತ ಆರಿ ಅಂಗಾರಾಗಿದ್ದ. ಆತನಲ್ಲಿ ತಕ್ಷಣಕ್ಕೆ ಜವಾಬು ಇರಲಿಲ್ಲ. ಬಸೂ ಆಕೆ ಕಣ್ಣೊಳಗೆ ಕಣ್ಣಿಟ್ಟು ನೋಡುವ ಧೈರ್ಯವನ್ನೂ ಮಾಡಲಿಲ್ಲ.

ಏನಾದರೂ ಹೇಳಲೇಬೇಕಲ್ಲ. ಆದರೂ ತಪ್ಪು ಅವನದಲ್ಲ ಎಂಬುದು ಆಕೆಗೂ ಅರಿವಿತ್ತು. ನಿಧಾನ ಮೊಗವೆತ್ತಿ ಅಂದ, 'ನಿನ್ನ ನಂಬರ್ ಕೊಡು... ಫೋನ್ ಮಾಡಿ ಸಿಗ್ತೀನಿ... ಆಗ ಬಹುಶಃ ನಿನ್ನ ಮಾತಿಗಿ ಉತ್ತರ ಕೊಡಬೋದು... ಈಗ ಇಷ್ಟರಾಗ ಗುರುಲಿಂಗರು ಬಂದರ ನಿನ್ನ ಸವಾಲಿಗಿ ಜವಾಬ ಅರ್ಧಕ್ಕ ನಿಲ್ಲತೇತಿ... ಪ್ಲೀಜ್!'